ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು**

ದೂರವಾಣಿ ಸಂಖ್ಯೆ:0821-2424079,2 422110,2428383

ಫ್ಯಾಕ್ಸ್ ನಂ : 2429012 & 2428383 E-Mail deo.mysore@gmail.com

ಸಂಖ್ಯೆ : ಎಲ್ಎನ್ ಡಿ(1)ಸಿಆರ್ 13/2023-24

ದಿನಾಂಕ: 17 /07/2023.

## ಅಧಿಕೃತ ಜ್ಞಾಪನ

ವಿಷಯ: ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಸೀಹಳ್ಳಿ ಗ್ರಾಮದ ಸ.ನಂ. 296ರಲ್ಲಿ 0-02ಗುಂಟೆ ಜಮೀನನ್ನು ಭಾರತ ಸರ್ಕಾರದ "4ಜಿ ಸ್ಯಾಚುರೇಷನ್ ಪ್ರಾಜೆಕ್ಟ್" ಕಾರ್ಯಕ್ರಮದ ಅಡಿಯಲ್ಲಿ ದೂರ ಸಂಪರ್ಕ ಜಾಲವಿಲ್ಲದ ಗ್ರಾಮಗಳಿಗೆ ದೂರ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶಕ್ಕಾಗಿ ದೂರ ಸಂಪರ್ಕ ಸ್ಥಾವರಗಳನ್ನು ಸ್ಥಾಪಿಸಲು ಬಿಎಸ್ ಎನ್ ಎಲ್ ಸಂಸ್ಥೆಗೆ ಉಚಿತವಾಗಿ ಗುತ್ತಿಗೆ ಆಧಾರದ ಮೇರೆ ಮಂಜೂರು ಮಾಡುವ ಕುರಿತು.

ಉಲ್ಲೇಖ1) ಭಾರತ ಸಂಚಾರ ನಿಗಮ ನಿಯಮಿತ ರವರ ಪತ್ರ ಸಂ:Plq/USOF/4G Saturation Project/2022-23/01, Dated: 03/10/2022 & 06/01/2023.

2) ಸರ್ಕಾರದ ಆದೇಶ ಸಂ:ಆರ್ ಡಿ 35 ಎಲ್ ಜಿಪಿ 2022, ಬೆಂಗಳೂರು. ದಿನಾಂಕ: 16/01/2023.

3) ತಹಶೀಲ್ದಾರ್, ಟಿ. ನರಸೀಪುರ ತಾಲ್ಲೂಕು ರವರ ಪತ್ರ ಸಂ:ಎಲ್ ಎನ್ ಡಿ ಸಿಆರ್ 25/2023-24, ದಿನಾಂಕ:17/09/2023.

4) ಉಪವಿಭಾಗಾಧಿಕಾರಿಗಳು, ಮೈಸೂರು ಉಪವಿಭಾಗ, ಮೈಸೂರು ರವರ ಪ್ರಸ್ತಾವನೆ ಪತ್ರ ಸಂಖ್ಯೆ MYSAC-LND/125/2023, ದಿನಾಂಕ:23/05/2023.

*****

ಭಾರತ ಸರ್ಕಾರದ "4 ಜಿ ಸ್ಯಾಚುರೇಷನ್ ಪ್ರಾಜೆಕ್ಟ್" ಕಾರ್ಯಕ್ರಮದ ಅಡಿಯಲ್ಲಿ ದೂರ ಸಂಪರ್ಕ ಜಾಲವಿಲ್ಲದ ಗ್ರಾಮಗಳಿಗೆ ದೂರ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲು ಸರ್ಕಾರಿ ಜಾಗಗಳನ್ನು ಒದಗಿಸುವಂತೆ ಕೋರಿ ವ್ಯವಸ್ಥಾಪಕರು, ಭಾರತ ಸಂಚಾರ ನಿಗಮ ನಿಯಮಿತ ರವರು ಉಲ್ಲೇಖ(1)ರ ದಿನಾಂಕ:03/10/2022ರಂತೆ ಈ ಕಛೇರಿಗೆ ಹಾಗೂ ಶುಲ್ಕ ಮನ್ನಾ ಮಾಡುವಂತೆ ಕೋರಿ ಸರ್ಕಾರಕ್ಕೆ ದಿನಾಂಕ:06/01/2023ರಂದು ಮನವಿ ಸಲ್ಲಿಸಿರುತ್ತಾರೆ.

ಸರ್ಕಾರದ ಉಲ್ಲೇಖ(2)ರ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ದೂರ ಸಂಪರ್ಕ ಜಾಲವಿಲ್ಲದ ಗ್ರಾಮಗಳಿಗೆ "4ಜಿ" ದೂರ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶಕ್ಕಾಗಿ ಟೆಲಿಕಾಂ ಸ್ಥಾವರಗಳನ್ನು ಸರ್ಕಾರಿ ಜಮೀನುಗಳಲ್ಲಿ ಸ್ಥಾಪಿಸಲು ಅಂತಹ ಗ್ರಾಮಗಳಲ್ಲಿ 2000 ಚದರ ಅಡಿ ವಿಸ್ತೀರ್ಣದ ಭೂಮಿಯು "ಗೋಮಾಳ ಜಮೀನಾಗಿದ್ದಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರನ್ವಯ "ಗೋಮಾಳ" ಶೀರ್ಷಿಕೆಯಿಂದ ತಗ್ಗಿಸುವ ಹಾಗೂ ಖರಾಬ್ ಜಮೀನು ಗಳಾಗಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68ರನ್ವಯ ಪ್ರಕ್ರಿಯೆ ಜರುಗಿಸುವ ಷರತ್ತಿಗೊಳಪಟ್ಟು ಅಂತಹ ಗ್ರಾಮಗಳಲ್ಲಿ 2000 ಚ.ಅಡಿ ವಿಸ್ತೀರ್ಣದ ಭೂಮಿಯನ್ನು ಬಿಎಸ್ ಎನ್ ಎಲ್ ಸಂಸ್ಥೆಗೆ ಉಚಿತವಾಗಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಿ, OFC ಕೇಬಲ್ ಹಾಕಲು ಮತ್ತು ಸದರಿ ಸ್ಥಾವರವನ್ನು ಸ್ಥಾಪಿಸಲು RoW (Right of way)ಶುಲ್ಕವನ್ನು ಮನ್ನಾ ಮಾಡಿ ಕೆಲವು ಷರತ್ತುಗಳನ್ನು ವಿಧಿಸಿ ಆದೇಶಿಸಿರುತ್ತದೆ.

5) ಗುತ್ತಿಗೆ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲಿ, ಗುತ್ತಿಗೆ/ಉಪಗುತ್ತಿಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರ ಯಾವುದೇ ರೀತಿಯ ಪರಭಾರೆ ಮಾಡತಕ್ಕದ್ದಲ್ಲ.

6) ಗುತ್ತಿಗೆ ನೀಡಲಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ.

7) ಗುತ್ತಿಗೆ ಜಮೀನು ಸಂಸ್ಥೆಗೆ ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂತಿರುಗಿಸತಕ್ಕದ್ದು.

8) ಗುತ್ತಿಗೆ ನೀಡಲಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

9) ಗುತ್ತಿಗೆ ಜಮೀನು 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿದ್ದು, ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು.

10) ಜಮೀನಿನ ಸಂಪೂರ್ಣ ಹಕ್ಕು ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ.

11) ಸದರಿ ಜಮೀನನ್ನು ಉದ್ದೇಶಿತ ಯೋಜನೆಗೆ ಬಳಸಿಕೊಳ್ಳುವುದು ಮತ್ತು ಜಮೀನು ಒತ್ತುವರಿಯಾಗದಂತೆ ಸಂರಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು, ಮುಂದುವರೆದು, ಸದರಿ ಜಮೀನು ಒತ್ತುವರಿಯಾದಲ್ಲಿ ಇದಕ್ಕೆ ಸಂಬಂಧಪಟ್ಟ ಸಂಸ್ಥೆಯವರೆ ನೇರ ಹೊಣೆಗಾರರಾಗಿರುತ್ತಾರೆ.

ಜಿಲ್ಲಾಧಿಕಾರಿ,
ಮೈಸೂರು ಜಿಲ್ಲೆ, ಮೈಸೂರು.

**ಪ್ರತಿಯನ್ನು :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು ಜಿಲ್ಲೆ ರವರಿಗೆ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
3. ಉಪ ವಿಭಾಗಾಧಿಕಾರಿಗಳು, ಮೈಸೂರು ಉಪವಿಭಾಗ, ಮೈಸೂರು ಇವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
4. ವ್ಯವಸ್ಥಾಪಕ ನಿರ್ದೇಶಕರು, ಟೆಲಿಕಾಂ "BSNL,ಕರ್ನಾಟಕ ಸರ್ಕಲ್, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ತಹಶೀಲ್ದಾರ್, ಟಿ. ನರಸೀಪುರ ತಾಲ್ಲೂಕು, ಟಿ ನರಸೀಪುರ ರವರಿಗೆ ಮೂಲ ಕಡತದೊಂದಿಗೆ ಕಳುಹಿಸುತ್ತಾ, ಗುತ್ತಿಗೆ ಮಂಜೂರಾತಿ ಜಮೀನನ್ನು ಗುತ್ತಿಗೆ ಭೂ ಮಂಜೂರಿ ವಹಿಯಲ್ಲಿ ಕಡ್ಡಾಯವಾಗಿ ದಾಖಲಿಸಿ, ಆರ್ ಟಿಸಿಯಲ್ಲಿ ಇಂದೀಕರಣ ಮಾಡುವುದು ಹಾಗೂ ಸಂಬಂಧಪಟ್ಟವರಿಗೆ ಜಮೀನು ಹಸ್ತಾಂತರ ಮಾಡುವುದು.
6. ಪ್ರಧಾನ ವ್ಯವಸ್ಥಾಪಕರು, ಭಾರತ ಸಂಚಾರ ನಿಗಮ ನಿಯಮಿತ, ಮೈಸೂರು ರವರಿಗೆ ಕಳುಹಿಸಿದೆ.
7. ಕಛೇರಿ ಕಡತಕ್ಕೆ .